ಆ) ಹೌದು, ಸಹಾಯಧನ ಕೋರಿ ಸಲ್ಲಿಸಿರುವ 126 ಅರ್ಜಿಗಳು ಯೋಜನೆಯ ಮಾರ್ಗಸೂಚಿಯನ್ವಯ ಅಗತ್ಯ ದಾಖಲಾತಿಳಾದ ಪಹಣಿ,ಚೆಕ್ಕಬಂದಿ, ಗಿಡಗಳ ಸರಿಯಾದ ಸಂಖ್ಯೆ ಮುಂತಾದವುಗಳನ್ನು ಒದಗಿಸದಿರುವ ಕಲಾರಣದಿಂದ ಸಹಾಯಧನ ನೀಡಲಾಗಿರುವುದಿಲ್ಲ.

ಇ) ಮೇಲಿನ "ಆ" ನಲ್ಲಿ ಉತ್ತರಿಸಲಾಗಿದೆ.

ಈ) ಮೇಲಿನ "ಆ" ನಲ್ಲಿ ಉತ್ತರಿಸಲಾಗಿದೆ.

ಉ) 2007–08 ನೇ ಸಾಲಿನಲ್ಲಿ ರಾಜ್ಯಕ್ಕೆ ಒಟ್ಟಾರೆ ರೂ 40.89 ಕೋಟಿಗಳಿಗೆ ಅನುದಾನ ಕೋರಿ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆಯನ್ನು ಈಗಾಗಲೇ ತಿಳಿಸಿರುತ್ತಾರೆ. ಮತ್ತು ಅನುದಾನವನ್ನು ಇನ್ನೂ ಬಿಡುಗಡೆ ಮಾಡಬೇಕಾಗಿದೆ. ಅನುದಾನ ದೊರೆತ ತಕ್ಷಣ ಎಲ್ಲಾ ಅರ್ಹ ಬಾಕಿ ಅರ್ಜಿಗಳನ್ನು ಇತ್ಯರ್ಥಪಡಿಸಲಾಗುವುದು.

238(566) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಜಮಖಂಡಿ ತಾಲ್ಲುಕಿನಲ್ಲಿ ಒಟ್ಟು ಕೃಷಿಗೆ ಯೋಗ್ಯವಾದ ಜಮೀನು ಎಷ್ಟು?

ಆ) ಈ ಜಮೀನಿನಲ್ಲಿ ಸವಳು–ಜವಳು ಬಂಜರಾದ ಜಮೀನು ಎಷ್ಟು?

ಇ) ಪ್ರತಿವರ್ಷ ಎಷ್ಟು ಭೂಮಿ ಈ ಪ್ರಕಾರ ಹಾಳಾಗುತ್ತಿದೆ?

ಈ) ಸವಳು–ಜವಳು ತೆಗೆದು ಕೃಷಿ ಯೋಗ್ಯವಾದ ಭೂಮಿ ತಯಾರಿಸಲು ಹಾಗೂ ಸವಲು–ಜವಳು ಕಡಿಮೆಮಾಡಲು ಯಾವ ಕೃಷಿ ಕೈಗೊಳ್ಳಲಾಗಿದೆ?

ಉ) ಇಲ್ಲಿಯವರೆಗೆ ಕೈಗೊಂಡ ಸುಧಾರಣಾ ಕ್ರಮಗಳಿಂದ ಎಷ್ಟು ಎಕರೆ ಜಮೀನು ಕೃಷಿಗೆ ಯೋಗ್ಯವಾಗಿದೆ?

ಶ್ರೀ ಬಂಡೆಪ್ಪ ಕಾಶಂಪೂರ

ಅ) ಜಮಖಂಡಿ ತಾಲ್ಲೂಕಿನಲ್ಲಿ ಒಟ್ಟು 77,699 ಹೆಕ್ಟೇರ್ ಪ್ರದೇಶವು ಕೃಷಿಗೆ ಯೋಗ್ಯವಾಗಿರುತ್ತದೆ.

ಆ) ತಾಲ್ಲೂಕಿನ ಸುಮಾರು 4146.12 ಹೆಕ್ಟೇರ್ ಪ್ರದೇಶವು ಸವಳು-ಜವಳು ಬಂಜರು ಭೂಮಿಯಿಂದ ಕೂಡಿರುತ್ತದೆ.

ಇ) ಸವಳು-ಜವಳು ಸಮಸ್ಯೆಯಿಂದ ಪ್ರತಿವರ್ಷ ತಾಲ್ಲೂಕಿನ ಸುಮಾರು 100-150 ಹೆಕ್ಟೇರ್ ಪ್ರದೇಶವು ಹಾಳಾಗುತ್ತಿದೆ.

ಈ) ಬಿಸಿಗಾಲುವೆಗಳ ನಿರ್ಮಾಣದ ಮೂಲಕ ಸವಳು-ಜವಳು ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲಾಗುತ್ತಿದೆ.

ಉ) ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಸುಮಾರು 975 ಹೆಕ್ಟೇರ್ ಪ್ರದೇಶವನ್ನು ಕೃಷಿಗೆ ಯೋಗ್ಯವನ್ನಾಗಿ ಮಾಡಲಾಗಿದೆ.

243(567) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪದೆಶ್ನೆಗಳಿಗೆ ಉತ್ತರಿಸುವರೇ?

ಅ) ಬಾಗಲಕೋಟೆ ಡಿ.ಸಿ.ಸಿ. ಬ್ಯಾಂಕಿನಿಮ್ ಜಿಲ್ಲೆಯಲ್ಲಿ ಎಷ್ಟು ಸಾಲ ವಿತರಿಸಲಾಗಿದೆ?

ಆ) ಯಾವ ಪ್ರಕಾರ ಮತ್ತು ಯಾವ ಯಾವ ಸಮುದಾಯಕ್ಕೆ ಹೇಗೆ ವಿತರಿಸಲಾಗಿದೆ?